ಜಿಲ್ಲಾಧಿಕಾರಿಗಳವರ ಕಾರ್ಯಾಲಯ,ಹಾವೇರಿ ಜಿಲ್ಲೆ,ಹಾವೇರಿ

ಭೂಸ್ವಾಧೀನ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು ಪುನರವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ 2013ರ (ದಿನಾಂಕ01–01–2014 ರಿಂದ ಜಾರಿಗೆ ತಂದ ಅಧಿಸೂಚನೆ ಪ್ರಕಾರ) ರೊಂದಿಗೆ ಓದಲಾದ ಕಲಂ 11(1)ರನ್ವಯ ಅಧಿಸೂಚನೆ

ಕ್ರ.ಸಂ:ಎಲ್.ಎ.ಕ್ಯೂ:ಯುಟಿಪಿ:ವಹಿ: DC-HAV. 15022(11)/6/2017-HAV-LAQ, ದಿನಾಂಕ 22-02-2017

ಈ ಕೆಳಗಿನ ಅನುಸೂಚಿಯಲ್ಲಿ ಕಾಣಿಸಿದ ಜಮೀನುಗಳು ಒಂದು ಸಾರ್ವಜನಿಕ ಉದ್ದೇಶಕ್ಕಾಗಿ ಅಂದರೆ ರಾಣೇಬೆನ್ನೂರು ತಾಲೂಕ ಹಲಗೇರಿ ಗ್ರಾಮದ ತುಂಗಾ ಮೇಲ್ದಂಡೆ ಯೋಜನೆಯ ಮೈನರ್–29ರ ಕಾಲುವೆಯ ನಿರ್ಮಾಣ ಕುರಿತು ಭೂಸ್ವಾಧೀನ (ನೀರಾವರಿ ಯೋಜನೆಗಾಗಿ) ಬೇಕಾಗುವುದೆಂದು ಜಿಲ್ಲಾಧಿಕಾರಿಗಳು, ಹಾವೇರಿ ಇವರಗೆ ಕಂಡು ಬಂದಿದೆ.

ಈ ಮೂಲಕ ತಿಳಿಸುವುದೇನೆಂದರೆ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು ಪುನರವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ 2013ರ (ದಿನಾಂಕ 01–01–2014 ರಿಂದ ಜಾರಿಗೆ ತಂದ ಅಧಿಸೂಚನೆ ಪ್ರಕಾರ) ಕರ್ನಾಟಕ ಸರಕಾರದ ಆದೇಶ ಸಂ:ಕಂಇ/18ಆರ್ಇಎಚ್/2014 ದಿನಾಂಕ 06–02–2014 ರಂತೆ ಹೊಸ ಕಾಯ್ದೆ 2013ರ ಕಲಂ 11ರ ಸೌಲಭ್ಯದ ಮೇರೆಗೆ (2013 ಕೇಂದ್ರದ 30ನೇ ಕಾಯ್ದೆ) ಸದರ ಕಾನೂನಿನ ಕಲಂ 12ರ ಮೇರೆಗೆ ಪ್ರದತ್ತವಾದ ಅಧಿಕಾರ ಚಲಾಯಿಸುವಂತೆ ಜಿಲ್ಲಾಧಿಕಾರಿಗಳು ಹಾವೇರಿ ರವರು ಈ ಮೂಲಕ ಕಾರ್ಯಪಾಲನೆ ಪ್ರಾಧಿಕಾರವನ್ನು ವಿಶೇಷ ಭೂಸ್ವಾಧಿನ ಅಧಿಕಾರಿಗಳು ತುಂಗಾ ಮೇಲ್ದಂಡೆ ಯೋಜನೆ ರಾಣೇಬೆನ್ನೂರು ಇವರಿಗೆ ನೀಡಲಾಗಿದೆ. ಹಾಗೂ ಕಲಂ 43ರ ಮೇರೆಗೆ ಭೂಸ್ವಾಧೀನ ಅಧಿಕೃತ ಪ್ರಾಧಿಕಾರದ ಕಾರ್ಯಪಾಲನೆಯನ್ನು ವಿಶೇಷ ಭೂಸ್ವಾಧೀನಾಧಿಕಾರಿಗಳು ಇವರಗೆ ನೀಡಲಾಗಿದೆ.

ಸರ್ಕಾರದ ಆದೇಶ ಸಂ/ಕಂಇ/36/ಭೂಸ್ವಾವಿ/2014 ದಿನಾಂಕ 13–3–2014ರನ್ವಯ ಮತ್ತು ತಿದ್ದುಪಡಿ ಆದೇಶ ದಿನಾಂಕ 22–4–2014 ರನ್ವಯ ಕಲಂ 6(2)ಅಡಿಯಲ್ಲಿ ನೀರಾವರಿ ಯೋಜನೆಗಳಿಗಾಗಿ ಭೂಸ್ವಾಧೀನಪಡಿಸುವಾಗ ಪರಿಸರದ ಮೇಲಿನ ಪರಿಣಾಮ ನಿರ್ಧರಣದ ಅಂಶ (Environment Impact Assessment) ಪ್ರಕ್ರಿಯೆಯನ್ನು ಬೇರಾವದೇ ಕಾಯ್ದೆಗಳಿಯಲ್ಲಿ ಮಾಡಬೇಕಾದಲ್ಲಿ ಸಾಮಾಜಿಕ ನಿರ್ಧರಣ ಅಂಶ (Social Impact Assessment) ತುಂಗಾ ಮೇಲ್ದಂಡೆ ಯೋಜನೆಗೆ ಅನ್ವಯಿಸುವುದಿಲ್ಲವೆಂದು ಸ್ಪಷ್ಟೀಕರಿಸಿದೆ.

2013 ಕಾಯ್ದೆ ಕಲಂ 15(1)ರ ಮೇರೆಗೆ ಆಸಕ್ತಿವುಳ್ಳವರು ತಮ್ಮ ತಂಟೆ ತಕರಾರುಗಳನ್ನು ಈ ಅಧಿಸೂಚನೆ ಪ್ರಕಟಗೊಂಡ 60 ದಿನಗೊಳಗಾಗಿ ಈ ಕಾರ್ಯಾಲಯಕ್ಕೆ ಅರ್ಜಿ ಸಲ್ಲಿಸಬೇಕು ನಂತರ ಬಂದ ಅರ್ಜಿಗಳನ್ನು ಯಾವುದೇ ಮುನ್ಸೂಚನೆ ನೀಡದೆ ವೀಲೆಯಕ್ಕೆ ಹಾಕಲಾಗುವುದು.

ಈ ಜಮೀನು ಸ್ವಾಧೀನ ಕೆಲಸ ನಿರ್ವಹಿಸುವಲ್ಲಿ ಸರಕಾರದಿಂದ ನೇಮಿಸಲ್ಪಟ್ಟ ಮೋಜಣಿದಾರರಾಗಲಿ ಅಥವಾ ಈ ಕೆಲಸ ಮಾಡುವವರಿಗೆ ಯಾರು ಅಡ್ಡಿ ಮಾಡಕೂಡದೆಂದು ಎಚ್ಚರಿಸಲಾಗಿದೆ. ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು ಪುನರವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ 2013ರ ಕಾಯ್ದೆ ಕಲಂ 11(4)ರ ಮೇರೆಗೆ ಈ ಅಧಿಸೂಚನೆ ಪ್ರಕಟಗೊಂಡ ದಿನಾಂಕದಿಂದ ಸದರಿ ಸ್ವಾಧೀನಪಡಿಸಿಕೊಳ್ಳಲಿರುವ ಭೂಮಿಯನ್ನು ಒಪ್ಪಂದದ ಮೇರೆಗೆ ವಿಕ್ರಯಿಸುವ ಭೋಗ್ಯಕ್ಕೆ ಅಡವಿಡುವ, ಅನುಭವಿಸುವ, ಬದಲಾಯಿಸುವ ಅಥವಾ ಇನ್ನಾವುದೇ ರೀತಿಯ ಅಭಿವೃದ್ದಿ ಕಾರ್ಯಗಳನ್ನು ಕೈಗೊಳ್ಳಲು ನಿರ್ಬಂದಿಸಿದೆ. ಅಂತಹ ಯಾವುದೇ ಕ್ರಯ ಅಥವಾ ಇನ್ನಾವುದೇ ರೀತಿಯ ಅಭಿವೃದ್ದಿ ಕಾರ್ಯಗಳನ್ನು ಐತೀರ್ಪು ರಚಿಸುವಾಗ ಗಣನೆಗೆ ತೆಗೆದುಕೊಳ್ಳದೆ ಅಂತಿಮವಾಗಿ ಸದರಿ ಕಾಯ್ದೆ ಅನ್ವಯ ಭೂಸ್ವಾಧೀನಪಡಿಸಿಕೊಳ್ಳಲಾಗುವುದೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

–:ಅನುಸೂಚಿ:–

ಜಿಲ್ಲೆ : ಹಾವೇರಿ ತಾಲೂಕ : ರಾಣೇಬೆನ್ನೂರು ಹೋಬಳಿ : ಕುಪ್ಪೇಲೂರು ಗ್ರಾಮ: ಹಲಗೇರಿ

ಅ.ನಂ	ಖಾತೆದಾರರ ಹೆಸರು	ಅನುಭವದಾರರ ಹೆಸರು ಮತ್ತು ಋಣಭಾರ ಹಿಸ್ಸಾ	ಜಮೀನಿನ ಸ್ವಾಧೀನತೆ		ವಿಸ್ತೀರ್ಣ	ಆಕಾರ	ಚಕ್ಕಬಂದಿ			
			ರಿ.ಸ.ನಂ ಹಿಸ್ಸಾ ನಂ.	ಮಣ್ಣಿನ ನಮೂನೆ	ಎ–ಗು		ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
1	2	3	4	5	6	7	8	9	10	11
1	ಮಲ್ಲಾಡದ ನಾಗಪ್ಪ ಕಲ್ಯಾಣಪ್ಪ 5–01	ಕೆ.ವಿ.ಜಿ.ಬ್ಯಾಂಕ್ ಹಲಗೇರಿ	83/2	ಯರಿ	00–22	1.13	ಹಳ್ಳ	ಹಳ್ಳ	83ಪೈ	84
2	ಕನ್ನಪ್ಪಳವರ ವೀರಪ್ಪ ಬಿನ್ ಉಜಣೆಪ್ಪ @ ಉಜ್ಜಪ್ಪ 3–10	ಕೆ.ವಿ.ಜಿ.ಬ್ಯಾಂಕ್ ಹಲಗೇರಿ	92/2ಅ	ಯರಿ	00–15		93	91	ಹಳ್ಳ	ರಸ್ತೆ
				ಒಟ್ಟು	0–37					

Halageri 11(1) 0-37

15.11.16
ವಿಶೇಷ ಭೂಸ್ವಾಧೀನಾಧಿಕಾರಿಗಳು
ತುಂಗಾ.ಮೇಲ್ದಂಡೆ.ಯೋಜನೆ, ರಾಣೇಬೆನ್ನೂರು

1

PR no – 111

ಜಿಲ್ಲಾಧಿಕಾರಿಗಳು, ಹಾವೇರಿ
…/17